ಕರ್ನಾಟಕ ಪಶುವೈದ್ಯಕೀಯ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ

# ಪಶುವೈದ್ಯಕೀಯ ಮಹಾವಿದ್ಯಾಲಯ

ನಂದಿನಗರ, ಅ. ಪೆ. ಸಂಖ್ಯೆ 6, ಬೀದರ – 585 401 (ಕರ್ನಾಟಕ)

ದೂರವಾಣಿ : 08482 – 245106
ಇ-ಮೇಲ್ : deanvcb@gmail.com

ಡೀನ್‌ರವರ ಕಾರ್ಯಾಲಯ

**ಸಂಖ್ಯೆ** ಡೀನ್/ಪವೈಮ(ಬೀ)/2021-22 **ದಿನಾಂಕ** 09-08-2021

Veterinary College, BIDAR
Sl. No: 1849 Date: 09/08/21

## ಪ್ರಕಟಣೆ

**ವಿಷಯ :** ಗುತ್ತಿಗೆ ಆಧಾರದ ಮೇಲೆ ಭೋಧಕರನ್ನು ನೇಮಕಾತಿ ಕುರಿತು

**ಉಲ್ಲೇಖ:** ಕುಲಸಚಿವರ ಆದೇಶ ಸಂಖ್ಯೆ R/VCB-CT/2021-22/373-A Date 29-07-2021

<><><>

ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ, ಬೀದರನ ಪಶುವೈದ್ಯಕೀಯ ಮಹಾವಿದ್ಯಾಲಯದಲ್ಲಿ ಭೋಧಕ ಸಿಬ್ಬಂದಿಗಳನ್ನು 179 ದಿನಗಳಿಗೆ ಮೀರದಂತೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಉದ್ದೇಶಿಸಲಾಗಿದೆ. ಸಂಬಂಧಪಟ್ಟ ಅರ್ಜಿದಾರರು ವಿಷಯದಲ್ಲಿ ಎಮ್‌ವಿಎಸ್‌ಸಿ (MVSc) ಆಥವಾ ಪಿಎಚ್‌ಡಿ (Ph.D) ಸ್ನಾತಕೋತರ ಪದವಿ ಪಡೆದಿರಬೇಕು.

| ಕ್ರ ಸ | ಹುದ್ದೆಯ ಹೆಸರು | ವಿಷಯ/ವಿಭಾಗದ ಹೆಸರು | ಹುದ್ದೆಗಳ ಸಂಖ್ಯೆ |
|---|---|---|---|
| 1 | ಸಹಾಯಕ ಪ್ರಾಧ್ಯಾಪಕರು | ಪಶುವೈದ್ಯಕೀಯ ಸಾರ್ವಜನಿಕ ಹಾಗೂ ಸಮುದಾಯ ರೋಗ ಅಧ್ಯಯನಶಾಸ್ತ್ರ (Veterinary Public Health) | 01 |
| 2 | ಸಹಾಯಕ ಪ್ರಾಧ್ಯಾಪಕರು | ಪಶುವೈದ್ಯಕೀಯ ಸ್ತ್ರೀರೋಗ ಮತ್ತು ಪ್ರಸೂತಿ ಶಾಸ್ತ್ರ (Veterinary Gynecology & Obstetrics) | 01 |

**<u>ಷರತ್ತು ಮತ್ತು ನಿಭಂಧನೆಗಳು:</u>**

1. **<u>ದಿನಾಂಕ 16-08-2021 ರಂದು ಬೆಳಗ್ಗೆ 10.00 ಗಂಟೆಯ ನಂತರ</u>** ಡೀನ್, ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರನಲ್ಲಿ ಸ್ವವಿವರದೊಂದಿಗೆ (ಬಯೋಡೆಟಾ) ಮೂಲ ದಾಖಲೆಗಳ ಸಹಿತ ಸಂದರ್ಶನಕ್ಕೆ ಹಾಜರಾಗುವುದು
2. ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿಯೇ ಸಂದರ್ಶನಕ್ಕೆ ಹಾಜರಾಗತಕ್ಕದ್ದು ಮತ್ತು ಪ್ರವಾಸ ಭತ್ಯೆ/ಇತರೆ ಯಾವುದೇ ಭತ್ಯೆಗೆ ಅರ್ಹರಿರುವುದಿಲ್ಲ
3. ಮೇಲೆ ತಿಳಿಸಲಾದ ಹುದ್ದೆಗಳು ಸಂಪೂರ್ಣವಾಗಿ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಆಗಿರುತ್ತದೆ. ಸಂಬಂಧಪಟ್ಟಂತೆ ಖಾಯಂ ಸಕ್ರಮಾತಿ ಮತ್ತು ಹಿರಿತನ ಅರ್ಹತೆಗೆ ಪರಿಗಣಿಸಲಾಗುವುದಿಲ್ಲ. ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಹೊಂದಿರುವ ಅಭ್ಯಾರ್ಥಿಗಳಿಗೆ ಮುಂಚಿತವಾಗಿ ಯಾವುದೇ ಮಾಹಿತಿ ನೀಡದೆ ಗುತ್ತಿಗೆ ಅವಧಿಯನ್ನು ರದ್ದು ಪಡಿಸುವ ಮತ್ತು ತೆಗೆದುಹಾಕುವ ಹಕ್ಕನ್ನು ಡೀನ್‌ರವರು ಹೊಂದಿರುತ್ತಾರೆ.
4. ಸ್ನಾತಕೋತ್ತರ ಹಾಗೂ ಪಿಎಚ್‌ಡಿ ಹೊಂದಿರುವ ಅಭ್ಯರ್ಥಿಗಳಿಗೆ <u>ರೂ. 57600/- (-) ರೂ.100/-</u> ಪ್ರತಿ ತಿಂಗಳು ಸಂಭಾವನೆ ನೀಡಲಾಗುವುದು.
5. ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಹೊಂದಿದ ಆಭ್ಯರ್ಥಿಗಳನ್ನು ಅವಶ್ಯಕತೆಗನುಗುಣವಾಗಿ ಡೀನ್‌ರವರು ನಿಗದಿಪಡಿಸಿದ ಕೆಲಸದ ಮೇಲೆ ನಿಯೋಜಿಸಲು ಸಂಪೂರ್ಣ ಹಕ್ಕನ್ನು ಹೊಂದಿರುತ್ತಾರೆ.
6. ಕರ್ನಾಟಕ ರಾಜ್ಯದ ಮೂಲ ನಿವಾಸಿಗಳು ಮತ್ತು ಕನ್ನಡದ ಬಳಕೆ/ವ್ಯವಹಾರಿಕ ಜ್ಞಾನ ಹೊಂದಿರುವ ಅಭ್ಯಾರ್ಥಿಗಳಿಗೆ ಮೊದಲ ಆದ್ಯತೆ ನೀಡಲಾಗುವುದು
7. ಕಲ್ಯಾಣ ಕರ್ನಾಟಕ/ಹೈದ್ರಬಾದ ಕರ್ನಾಟಕದ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.

ಡೀನ್ (ಪವೈ)
DEAN (Vety)
ಪಶುವೈದ್ಯಕೀಯ ಮಹಾವಿದ್ಯಾಲಯ
Veterinary College, Bidar
ನಂದಿನಗರ, ಬೀದರ

**<u>ಪ್ರ.ಆ:</u>**

1. ಡೀನ್, ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು/ಹಾಸನ/ಶಿವಮೊಗ್ಗ/ಉದಗಿರ/ನಾಗಪೂರ/ಪರಭಣಿ ಮಾಹಿತಿಗಾಗಿ ಮತ್ತು ನಾಮಫಲಕದಲ್ಲಿ ಹಾಕಲು ಕೋರಿದೆ